ಭಾರತ್ ಸಹಕಾರ ಗೃಹ ನಿರ್ಮಾಣ ಸಂಘದ ಜಾಗದಲ್ಲಿ ಅಕ್ರಮವಾಗಿ ಗುಡಿಸಲು ಹಾಕಿಕೊಂಡಿರುವುದನ್ನು ತೆರವು ಗೊಳಿಸುವುದು.

ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ) : ಮಾನ್ಯ ಅಧ್ಯಕ್ಷರೇ, ಭಾರತ ಸಹಕಾರ ಗೃಹನಿರ್ಮಾಣ ಸಂಘದವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಮತ್ತು ಸುರಹಳ್ಳಿ ಗ್ರಾಮಗಳ ಕೆಲವು ಸರ್ವೆ ನಂಬರ್‌ಗಳನ್ನು ಹಿಂದೆ ಕಾನೂನಿನ ಅಡಿಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆಗಳೆಲ್ಲಾ ಮುಗಿದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರಿಂದ ನಿರಕ್ಷೇಪಣಾ ಪತ್ರವನ್ನು ಪಡೆದು, ಅಲ್ಲಿ ಲೇಔಟ್ ಮಾಡಿ, ಈಗ ಸೈಟುಗಳನ್ನು ವಿತರಣೆ ಮಾಡುವಂತಹ ಹಂತದಲ್ಲಿದ್ದಾಗ, ಪಟಾಲಮ್ಮ ವಸತಿ ನಿವಾಸಿಗಳ ಸಂಘ ಎನ್ನತಕ್ಕಂಥವರು ಅಲ್ಲಿ ಹೋಗಿ ಅಕ್ರಮವಾಗಿ ನೂರಾರು ಗುಡಿಸಲುಗಳನ್ನು ಇಡೀ 68 ಎಕರೆ ಪ್ರದೇಶದಲ್ಲಿ ಹಾಕಿದರು. ಇದಕ್ಕೆ ನ್ಯಾಯಾಲಯದಿಂದ ತಡೆಯಾಜ್ಞೆ ಇದೆ. ಹಿಂದೆ ಸರ್ಕಾರ ಉತ್ತರ ಕೊಟ್ಟಾಗಲೂ ಕೂಡ ಭೂ ಸ್ವಾಧೀನ ಪ್ರಕ್ರಿಯೆ ಸರಿಯಾಗಿದೆ, ಭೂ ಸ್ವಾಧೀನಗಳನ್ನು ಮಾಡಿಕೊಂಡು ಆ ಸಹಕಾರ ಸಂಘಕ್ಕೆ ಜಮೀನನ್ನು ನಾವು ವರ್ಗಾವಣೆ ಮಾಡಿಕೊಟ್ಟಿದ್ದೇವೆ ಎನ್ನತಕ್ಕಂಥ ವಿಚಾರವನ್ನೂ ಕೂಡ ಈ ಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ನಂತರ ಏನು ಬೆಳವಣಿಗೆಗಳು ನಡೆಯಿತೋ ಗೊತ್ತಿಲ್ಲ. ಹಿಂದೆ ರೆವಿನ್ಯೂ ಸಚಿವರು ಒಂದು ಹಂತದಲ್ಲಿ ಈ ಭೂ ಸ್ವಾಧೀನ ಪ್ರಕ್ರಿಯೆಯನ್ನೇ ವಜಾ ಮಾಡಿದರು. ಅದರ ಮೇಲೆ ನ್ಯಾಯಾಲಯಕ್ಕೆ ಹೋದರು. ನ್ಯಾಯಾಲಯ ಈ ಕಂದಾಯ ಸಚಿವರ ನಡವಳಿಕೆ ಏನಿತ್ತು, ಅದು ಅಸಿಂಧು, ಕ್ರಮಬದ್ಧವಲ್ಲವೆಂದು ವಜಾ ಮಾಡಿತು. ಈಗ ಅವರು ಸ್ವಾಧೀನದಲ್ಲಿದ್ದಾರೆ. ಈ ಮಧ್ಯೆ ಪಟಾಲಮ್ಮ ವಸತಿ ನಿವಾಸಿಗಳ ಸಂಘ ಬಂದಿದೆ. ಅಕ್ರಮವಾಗಿ ಅಲ್ಲಿ ಹಾಕಿರತಕ್ಕಂಥ ಗುಡಿಸಲುಗಳನ್ನು ಸರ್ಕಾರ ಇರತಕ್ಕಂಥ ಕಾನೂನಿನ ವ್ಯಾಪ್ತಿಯಲ್ಲಿ ಅದನ್ನು ತೆರವು ಮಾಡಿಸಿ ಕೊಡಬೇಕು. ಅಲ್ಲಿ ನ್ಯಾಯಾಲಯದ ತಡೆಯಾಜ್ಞೆ ಇದೆ ತಾವು ಸೂಕ್ತ ಕ್ರಮವನ್ನು ಕೂಡಲೇ ತೆಗೆದುಕೊಂಡು ಆ ಸಹಕಾರ ಸಂಘಕ್ಕೆ ಮತ್ತೆ ಆ ಭೂಮಿ ವರ್ಗಾವಣೆ ಆಗಲಿಕ್ಕೆ ತಾವು ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತಹ ವಿಚಾರದ ಬಗ್ಗೆ ನಾವು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಹುಬ್ಬಳ್ಳಿಯ ಆರ್.ಟಿ.ಓ. ಕಛೇರಿಯಲ್ಲಿ ಭ್ರಷ್ಟಾಚಾರ

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ) : ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ನಗರದಲ್ಲಿ ಇರುವಂತಹ ಆರ್.ಟಿ.ಓ. ಆಫೀಸಿನಲ್ಲಿ ಇವತ್ತು ಯಾವುದೇ ಒಬ್ಬ ವಾಹನ ಚಾಲಕ ಅಥವಾ ಆಟೋರಿಕ್ಷಾ ಚಾಲಕರು ಅಲ್ಲಿಗೆ ಹೋದರೆ, ಹಣ ಕೊಡದೇ ಅಲ್ಲಿ ಯಾವುದೇ ಕೆಲಸ ಆಗುವುದಿಲ್ಲ. ಭ್ರಷ್ಟಾಚಾರದ ಆಗರವಾಗಿ ಇವತ್ತು ಆರ್.ಟಿ.ಓ. ಆಫೀಸ್ ಇದೆ. ಕೆಲವು ವಾರಗಳ ಹಿಂದೆ ಅಲ್ಲಿನ ಎಂಟ್ರೆನ್ಸ್ ಡೋರ್ ಅನ್ನು ಬಂದ್ ಮಾಡಿ, ಒಂದೇ ಡೋರ್ ಅನ್ನು ಓಪನ್ ಇಟ್ಟಿದ್ದಾರೆ. ಯಾರೋ ಒಬ್ಬ ವೆಹಿಕಲ್ ಇನ್ಸ್‌ಪೆಕ್ಟರ್ ಒಬ್ಬನನ್ನು ಅಲ್ಲಿ ಹೊರಗೆ ಕಾವಲುಗಾರನಾಗಿ ಇರಿಸಿದ್ದಾರೆ. ಯಾರು ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳಲಿಕ್ಕೆ ಸಾಧ್ಯವಿದೆಯೋ ಅಂತಹವರಿಗೆ ಮಾತ್ರ ಅಲ್ಲಿ ಒಳಗೆ ಬಿಡುತ್ತಾರೆ. ಉಳಿದ ಸಾರ್ವಜನಿಕರಿಗೆ ಅಲ್ಲಿ ಪ್ರವೇಶ ಇಲ್ಲ. ಅಲ್ಲಿರುವ ಅಧಿಕಾರಿಗಳೆಲ್ಲಾ ಕಳೆದ 15-20 ವರ್ಷಗಳಿಂದ ಅಲ್ಲಿಯೇ ತಳ ಊರಿದ್ದಾರೆ.

11.50 ಎ.ಎಂ

ಅವರನ್ನು ಇಲ್ಲಿಯವರೆಗೆ ಬೇರೆ ಕಡೆ ವರ್ಗ ಮಾಡಿಲ್ಲ, ಅಲ್ಲಿ ಆರ್.ಟಿ.ಓ. ಸಹಿತ ಎಲ್ಲಾ ಅಧಿಕಾರಿಗಳು ಶಾಮೀಲಾಗಿ ಎಲ್ಲರಿಗೂ ಸಮ ಪಾಲು ಇದೆ. ಎಲ್ಲರೂ ಭ್ರಷ್ಟಾಚಾರಗಳಾಗಿದ್ದಾರೆ. ಅಲ್ಲಿರತಕ್ಕಂತಹ ಆಟೋ ಚಾಲಕರಿಗೆ ಮತ್ತು ವಾಹನ ಚಾಲಕರಿಗೆ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗಿದೆ. ಅದನ್ನು ದಯವಿಟ್ಟು ಅಲ್ಲಿರತಕ್ಕಂತಹ ಆರ್.ಟಿ.ಓ ಬಗ್ಗೆ, ಅಲ್ಲಿರತಕ್ಕಂತಹ ಸಿಬ್ಬಂದಿ ವರ್ಗದ ಬಗ್ಗೆ ತಕ್ಷಣ ಕ್ರಮತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ದ.ಕ. ಹಾಗೂ ಕೊಡಗು ಜಿಲ್ಲೆಗಳಲ್ಲಿನ ಗ್ರಾಮೀಣ ಒಕ್ಕಲಿಗ ಜನಾಂಗದವರಿಗೆ ಹಿಂದುಳಿದ ವರ್ಗವೆಂದು ದೃಢೀಕರಿಸುವುದು

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಕೊಡಗು ಜಿಲ್ಲೆಯಲ್ಲಿ ಸುಮಾರು ಶೇಕಡ 25 ಗೌಡ ಜನಾಂಗದ ಜನ ಸಂಖ್ಯೆಯಿದ್ದು, ಅಲ್ಲಿನ ಜನಾಂಗದವರು ಬಹಳ ಹಿಂದುಳಿದವರು ಆಗಿದ್ದು ಹೆಚ್ಚಿನವರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವವರಾಗಿರುತ್ತಾರೆ. ಈ ಜನಾಂಗದವರು ಈಗಾಗಲೇ ರಾಜ್ಯ ಸರ್ಕಾರದ ನೀತಿಯ ಪ್ರಕಾರ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದು ಪ್ರವರ್ಗ 3 ಎ ವರ್ಗದವರೆಂದು ಪರಿಗಣಿಸಿ ಮೀಸಲಾಗಿ ದೃಢೀಕರಣಗಳನ್ನು ನೀಡಲಾಗುತ್ತಿದೆ. ಆದರೆ ಕೇಂದ್ರ ಸರ್ಕಾರವು 'ಮಂಡಲ್ ಆಯೋಗದ' ಶಿಫಾರಸ್ಸುಗಳನ್ನು ಅಂಗೀಕರಿಸಿ ಇತರ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಜಾರಿಗೆ ತರುವಾಗ ಗ್ರಾಮೀಣ ಒಕ್ಕಲಿಗರಿಗೆ ಮೀಸಲಾತಿಯನ್ನು ನಿಗದಿಪಡಿಸಿದೆ. ಈ ಮೀಸಲಾತಿಯು ಜಾರಿಗೆ ಬಂದ ಸಮಯದಲ್ಲಿ ಅಂದರೆ 1994ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕೊಡಗು ಜಿಲ್ಲೆಗಳಲ್ಲಿ ಒಕ್ಕಲಿಗ ಜನಾಂಗದವರಿಗೆ ಗ್ರಾಮೀಣ ಒಕ್ಕಲಿಗರು ಎಂದು ಪರಿಗಣಿಸಿ ಕೇಂದ್ರ ಸರ್ಕಾರದ ಮೀಸಲಾತಿ ದೃಢೀಕರಣವನ್ನು ನೀಡಲಾಗಿದೆ. ಆದರೆ 1994ರ ಅಂತ್ಯದಲ್ಲಿ ದಕ್ಷಿಣ ಕನ್ನಡದ ಒಕ್ಕಲಿಗ ಜನ ಸಂಖ್ಯೆ ಇರುವ ತಾಲ್ಲೂಕುಗಳಲ್ಲಿ ಅಂದರೆ ಪುತ್ತೂರು, ಸುಳ್ಯ, ಬಂಟ್ವಾಳ, ಬೆಳ್ತಂಗಡಿ, ಕೊಡಗು ಜಿಲ್ಲೆಯ ತಾಲ್ಲೂಕುಗಳಲ್ಲಿ ಕೇಂದ್ರ ಸರ್ಕಾರದ ಇತರ ಹಿಂದುಳಿದ ವರ್ಗದ ಮೀಸಲಾತಿ ಆಜ್ಞೆಯಾನುಸಾರ ಒಕ್ಕಲಿಗ ಜನಾಂಗದವರಿಗೆ ಗ್ರಾಮೀಣ ಒಕ್ಕಲಿಗರು ಎಂಬ ದೃಢೀಕರಣವನ್ನು ಸದರಿ ಜಿಲ್ಲೆಗಳ ಕಂದಾಯ ಅಧಿಕಾರಿಗಳ ಹಾಗೂ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳ ವ್ಯಾಖ್ಯಾನದ ಮೇರೆಗೆ ನಿಲ್ಲಿಸಿರುತ್ತಾರೆ. ಅಧಿಕಾರಿಗಳ ಒಂದು ವ್ಯಾಖ್ಯಾನದಿಂದಾಗಿ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯಲ್ಲಿರುವ ಗ್ರಾಮೀಣ ಬಡ ಒಕ್ಕಲಿಗ ಕುಟುಂಬದ ಯುವಕ ಯುವತಿಯವರಿಗೆ ದೊಡ್ಡ ಅನ್ಯಾಯವಾದಂತಾಗಿದೆ. ಆದುದರಿಂದ ದಯಾಳುಗಳಾದ ತಾವು ಕೂಡಲೇ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯ ಕಂದಾಯ ಅಧಿಕಾರಿಗಳಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದ ಒಕ್ಕಲಿಗ ಜನಾಂಗದವರಿಗೆ ಕೇಂದ್ರ ಸರ್ಕಾರದ ಇತರ ಹಿಂದುಳಿದ ವರ್ಗದವರಿಗೆ ಸಂಬಂಧಿಸಿದಂತೆ ಗ್ರಾಮೀಣ ಒಕ್ಕಲಿಗ ಎಂಬ ದೃಢೀಕರಣವನ್ನು ನೀಡುವಂತೆ ಸೂಕ್ತ ನಿರ್ದೇಶನ ನೀಡಬೇಕೆಂದು ನಾವು ಕೋರುತ್ತೇವೆ.